ಮಗು ಅಳು ನಿಲ್ಲಿಸಿ 'ಸರ, ಸರ' ಚೀಪತೊಡಗಿತು.

"ಆಲ್ಬರ್ಟ್, ಹೇಗೆ ಕಾಣ್ತಾಳೆ ನಮ್ಮ ಪುಟ್ಟಿ? ಏಂಜಲ್, ಏಂಜಲ್... ಅಲ್ವ?"

"ಖಂಡಿತ ಡಾರ್ಲಿಂಗ್. ಇದರ ಶ್ರೇಯಸ್ಸು ರಾಜಪಾಕಕ್ಕೆ ಸಲ್ಲಬೇಕು."

"ಆಲ್ಬರ್ಟ್, ದಯವಿಟ್ಟು 'ಆ' ಶಬ್ದವನ್ನು ಮಾತ್ರ ನನ್ನ ಮುಂದೆ ಎತ್ತಬೇಡ ಪ್ಲೀಜ್. ನನಗೆ ಹೆದರಿಕೆಯಾಗುತ್ತೆ."

"ಮೇಬಲ್, ನಿನ್ನ ಧೋರಣೆ ಮಾತ್ರ ಯಾಕೋ ನನಗೆ ಸರಿ ಕಾಣಿಸುತ್ತಿಲ್ಲ."

"ಅದು ಆಮೇಲೆ ನೋಡೋಣ. ಪುಟ್ಟಿ ಈ ಬಾರಿಯೂ ಪೂರಾ ಬಾಟಲನ್ನು ಖಾಲಿ ಮಾಡುವಂತೆ ಕಾಣಿಸುತ್ತದೆ." ಅವಳು ಹೇಳಿದ ಕೆಲವೇ ಕ್ಷಣಗಳಲ್ಲಿ ಬಾಟಲು ಖಾಲಿಯಾಯಿತು. ಮೇಬಲ್ ಜಾಗರೂಕತೆಯಿಂದ ಮಗುವಿನ ಬಾಯಿಂದ ಬಾಟಲನ್ನು ಹೊರಗೆಳೆದಳು. ಅದು ಮಗುವಿಗೆ ಅರಿವಾಯಿತು. ಅದು ನಿಪ್ಪಲನ್ನು ಜೋರಾಗಿ ಕಚ್ಚುತ್ತಾ 'ಸೊರಸೊರ' ಗಾಳಿ ಎಳೆಯತೊಡಗಿತು! ಆದರೂ ಮೇಬಲ್ ಬಾಟಲನ್ನು ಹೊರಗೆಳೆಯುವಲ್ಲಿ ಸಫಲಳಾದಳು. ಮಗುಕಿರಿಚಾಡಲುಶುರುವಿಟ್ಟುಕೊಂಡಿತು..."ವಾಯುತುಂಬ್ಕೊಂಡಿರಬೇಕು."ಎನ್ನುತ್ತಾ ಮೇಬಲ್ ಮಗುವನ್ನು ಹೆಗಲಮೇಲೆ ಮಲಗಿಸಿ ಬೆನ್ನ ಮೇಲೆ ತಟ್ಟಿದಳು. ಮಗು ಎರಡು ಬಾರಿ ಜೋರಾಗಿ ತೇಗಿತು. ಕೆಲವು ಸಮಯ ಮಗು ಶಾಂತವಾಗಿ ಮತ್ತೆ ಎಂದಿನಂತೆ ಬೊಬ್ಬಿಡತೊಡಗಿತು.

"ಮತ್ತೊಮ್ಮೆ ಹಾಗೇ ಮಾಡು ಮೇಬಲ್. ಅದು ಬಹಳ ಬೇಗ ಹಾಲು ಕುಡಿಯಿತು ಎನಿಸುತ್ತಿದೆ."

ಮೇಬಲ್ ಎರಡೂ ಹೆಗಲುಗಳ ಮೇಲೆ ಮಲಗಿಸಿದ್ದಲ್ಲದೆ, ಮಡಿಲಲ್ಲೂ ಹೊಟ್ಟೆ ಮೇಲೆ ಮಲಗಿಸಿ ಬೆನ್ನು ತಟ್ಟಿದಳು. ಈ ಬಾರಿ ಮಗು ತೇಗಲಿಲ್ಲ. ಅದರ ಅಳು ಜೋರುಜೋರಾಯಿತು.

"ಅಳು ಮಗುವಿನ ಶ್ವಾಸಕೋಶಗಳಿಗೆ ಒಳ್ಳೆಯ ವ್ಯಾಯಾಮವಂತೆ ಮೇಬಲ್. ಈ ಮೊದಲು ಕೇಳಿದ್ದೀಯಾ?" ಅವಳು ಮಗುವನ್ನು ಸಂತೈಸುವುದರಲ್ಲೇ ಮಗ್ನಳಾಗಿದ್ದಳು. ಐದು ನಿಮಿಷ ಕಳೆದರೂ ಮಗು ಅಳುವುದನ್ನು ನಿಲ್ಲಿಸಲಿಲ್ಲ.

"ನ್ಯಾಪ್ಕಿನ್ ಬದಲಾಯಿಸಿ ನೋಡು ಮೇಬಲ್. ನೆಂದಿರಬೇಕು." ಎನ್ನುತ್ತಾ ಆಲ್ಬರ್ಟ್ ಮತ್ತೊಂದು ನ್ಯಾಪ್ಕಿನನ್ನು ತಂದ.

ಆದರೂ ಮಗು ಅಳು ನಿಲ್ಲಿಸಲಿಲ್ಲ. "ಪಿನ್ನು ಗಿನ್ನು ಏನೂ ಚುಚ್ಕೊಂಡಿಲ್ಲ ತಾನೆ?" ಅವನು ಕೇಳಿದ. ಅವಳು ಪರೀಕ್ಷಿಸಿ ಇಲ್ಲವೆಂದಳು. ಅವರು ಒಬ್ಬರಿಗೊಬ್ಬರು ಎದಿರುಬದರಾಗಿ ಕುಳಿತುಕೊಂಡಿದ್ದರು. ಅವರ ಮುಖಗಳು ಮುದುಡಿಕೊಂಡಿದ್ದವು. ಮಗು ಅಳುತ್ತಲೇ ಇತ್ತು. ಅದಕ್ಕೆ ಸುಸ್ತಾಗಿದ್ದಂತೆಯೂ ಕಾಣಿಸುತ್ತಿರಲಿಲ್ಲ.

"ಮೇಬಲ್, ನನಗೊಂದು ಸಂಶಯ ಕಾಡುತ್ತಿದೆ..." ಕೊನೆಗೂ ಬಾಯಿ ಬಿಟ್ಟ ಆಲ್ಬರ್ಟ್.

"ಏನದು, ಆಲ್ಬರ್ಟ್?"

"ಮಗೂಗೆ ಇನ್ನೂ ಹೊಟ್ಟೆ ತುಂಬಿಲ್ಲ ಅನ್ಸುತ್ತೆ ಮೇಬಲ್... ಇನ್ನೊಂದಿಷ್ಟು ತುಂಬಿಸಿ ತರಲೇ?" ಅವನು ಏಳಲಣಿಯಾದ.

"ಆಲ್ಬರ್ಟ್!!... ನಿನ್ನ ವಿಚಾರ ನನಗೆ ಖಂಡಿತ ಒಪ್ಪಿಗೆಯಿಲ್ಲ..." ಅವಳು ಮುಗಿಸುವ ಮೊದಲೇ ಅವನು ಎದ್ದು ಅಡುಗೆಕೋಣೆಯ ಕಡೆಗೆ ನಡೆದು ವಾಪಸ್ಸು ಬರುತ್ತಿದ್ದ.

"ಈ ಬಾರಿ ನಾನು ಸ್ವಲ್ಪ ಹೆಚ್ಚಾಗಿಯೇ ತಯಾರಿಸಿದ್ದೇನೆ ಮೇಬಲ್..." ಅವನು ಹೇಳಿದ.

"ಆಲ್ಬರ್ಟ್, ನಿನ್ನ ತಲೆ ಸರಿ ಇದೆ ತಾನೆ? ಮಕ್ಕಳಿಗೆ ಕಡಿಮೆ ಫೀಡಿಂಗ್‌ನಷ್ಟೇ ಹೆಚ್ಚುವರಿ ಫೀಡಿಂಗ್ ಕೂಡ ಒಳ್ಳೇದಲ್ಲ."

"ನಾನು ತುಂಬಿಸಿರುವಷ್ಟೂ ಕೊಡಬೇಕಂತಿಲ್ಲ ಮೇಬಲ್... ನಿನಗೆ ಸಾಕೆನಿಸಿದಾಗ ನಿಲ್ಲಿಸು."